O.S 2/2023

P.W.6

ಸಾಕ್ಷಿಯನ್ನು ದಿಃ 06-04-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ.ವಿ.ಎಸ್.ಪಿ.ಪಿ ವಕೀಲರಿಂದ

ನಾನು ತಾರಿಕೊಪ್ಪದ ನಿವಾಸಿಯಾಗಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರ ಪರಿಚಯ ಸುಮಾರು 20 ವರ್ಷದಿಂದ ಇರುತ್ತದೆ. ಅವರು ವ್ಯವಸಾಯ ಮಾಡಿಕೊಂಡು ವಡವಿಹೊಸೂರಿನಲ್ಲಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ದವರಿಗೆ ಜಮೀನು Tenancy ಖಾಯ್ದೆಯಡಿ ಬಂದಿದ್ದು ಅವರೆ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ವಾದಿಗೆ ವಡವಿಹೊಸೂರಿನಲ್ಲಿ 2 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಅವರಿಗೆ ಇದ್ದನ್ನು ಹೊರತು ಪಡಿಸಿ ನನ್ನ ಜಮೀನಿನ ಪಕ್ಕದಲ್ಲಿ ಇನ್ನೊಂದು ಜಮೀನು ಇರುತ್ತದೆ ಅದು 12 ಎಕರೆ 16 ಗುಂಟೆ ಇರುತ್ತದೆ. ಅದಕ್ಕೆ ಸಂಬಧಪಟ್ಟ ದಾಖಲೆಗಳನ್ನು ನಾನು ನೋಡಿದ್ದೇನೆ. ಹಾಗೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಮತ್ತು 2 ರವರ ಪೂರ್ವ ದಿಕ್ಕಿಗೆ ನನ್ನ ಜಮೀನು ಇರುತ್ತದೆ. 1 ಮತ್ತು 2 ನೇ ಪ್ರತಿವಾದಿ ಹಾಗೂ ವಾದಿಯರ ಜಮೀನಿನ ಚಕಬಂದಿ ಹೇಳಲು ನನಗೆ ಬರುವುದಿಲ್ಲ. ವಾದಿಯರಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ. ಪಿ.ಎಮ್.ಎನ್ ವಕೀಲರಿಂದ

3 ಮತ್ತು 4 ನೇ ಪ್ರತಿವಾದಿಯರು ಮತ್ತು ವಾದಿಯರು ಸೇರಿಕೊಂಡು ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ಆದ್ದರಿಂದ ಅವರಿಗೂ ಜಮೀನಿನಲ್ಲಿ ಸಮನಾದ ಹಕ್ಕಿದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-06-04-2026
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ